# ಶ್ರೀರಾಮಕೃಷ್ಣರ ಅವತಾರ ವೈಶಿಷ್ಟ್ಯ

ಡಾ. ಹೆಚ್.ರಾಮಚಂದ್ರಸ್ವಾಮಿ

*ಅವತಾರತತ್ತ್ವವನ್ನು ತಮ್ಮದೇ ಆದ ರೀತಿಯಲ್ಲಿ ವಿವರಿಸಿರುವ ಶ್ರೀರಾಮಚಂದ್ರಸ್ವಾಮಿಯವರು ಈಗಾಗಲೆ 'ವಿವೇಕಪ್ರಭ' ಓದುಗರಿಗೆ ಪರಿಚಿತರಾಗಿರುವರು.*

> ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ ।
> ಅವತಾರವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥

ಈ ಶ್ಲೋಕ ಮೇಲ್ನೋಟಕ್ಕೆ ಭಾವೋದ್ವೇಗದ ಅಭಿವ್ಯಕ್ತಿ ಎನ್ನಿಸಬಹುದಾದ ಪ್ರಶಂಸೆಯ ಅತಿಶಯೋಕ್ತಿ ಎನ್ನಿಸಬಹುದು. ಆದರೆ ಈ ಶ್ಲೋಕ ಸ್ವಾಮಿ ವಿವೇಕಾನಂದರದು; ಮೂರು ವರ್ಷಗಳ ಕಾಲ ಪಾಶ್ಚಾತ್ಯ ದೇಶಗಳಲ್ಲಿ ನೂರಾರು ಉಪನ್ಯಾಸಗಳನ್ನು ಕೊಟ್ಟಿದ್ದರೂ ತನ್ನ ಗುರುವಿನ ಹೆಸರೆತ್ತದೆ ಸಂಯಮದಿಂದಿದ್ದ ವಿವೇಕಾನಂದರದು. ಆಧುನಿಕತೆಯನ್ನೂ ವೈಚಾರಿಕತೆಯನ್ನೂ ವೈಜ್ಞಾನಿಕ ಮನೋಭಾವವನ್ನೂ ಮೈಗೂಡಿಸಿಕೊಂಡಿದ್ದ ವಿವೇಕಾನಂದರು **ಸ್ಥಾಪಕಾಯ ಚ ಧರ್ಮಸ್ಯ** ಎಂದದ್ದೇಕೆ? ಶ್ರೀರಾಮಕೃಷ್ಣರ ಕಾಲಕ್ಕಿಂತ ಮುಂಚೆ ಧರ್ಮವೆಂಬುದು ಇರಲಿಲ್ಲವೆ? ಹಾಗಲ್ಲ; ಅನ್ಯದೇಶೀಯರ ಆಕ್ರಮಣಗಳಿಂದಾಗಿ ನಾವು ಕುಗ್ಗಿ ಹೋಗಿದ್ದೆವು; ಸಹಜವಾದ ನಮ್ಮ ಭಾವ ಬತ್ತಿಹೋಗಿ, ಧರ್ಮವೆಂದರೆ ಕೇವಲ ಶುಷ್ಕ ಕರ್ಮಾಚರಣೆ ಎನ್ನುವಂತಾಗಿ ಬಿಟ್ಟಿತ್ತು. ನಮಗೆ ಧರ್ಮವೆಂದರೆ ದಿವ್ಯಭಾವವೇ ಹೊರತು ಭಾವರಹಿತ ಆಚಾರಗಳಲ್ಲ ಎಂಬುದು ಮರೆತೇ ಹೋಗಿತ್ತು. ಅಂತಹ ದಿವ್ಯಭಾವದಲ್ಲಿಯೇ ಜೀವನದ ಉದ್ದಕ್ಕೂ ಬಾಳಿ ಧರ್ಮದ ಯಥಾರ್ಥರೂಪವನ್ನು ಶ್ರೀರಾಮಕೃಷ್ಣರು ತೋರಿಸಿದರು. ಈ ಅರ್ಥದಲ್ಲಿ ಅವರು 'ಧರ್ಮಸಂಸ್ಥಾಪಕರು.

**ಸರ್ವಧರ್ಮಸ್ವರೂಪಿಣೇ** —ಈ ಮಾತಿನ ಅರ್ಥ ನಮಗೆಲ್ಲ ತಿಳಿದಿರುವಂಥದೇ—ಜಗತ್ತಿನ ಇತಿಹಾಸದಲ್ಲಿ ಎಲ್ಲ ಧರ್ಮಗಳ ಒಳಗಿನ ಹೂರಣ ಒಂದೇ. ಅದೇ ದಿವ್ಯತೆಯ ಸಾಕ್ಷಾತ್ಕಾರ; ಧರ್ಮಗಳಲ್ಲಿ ಮೇಲು ಕೀಳು ಎಂಬುದಿಲ್ಲ. ಎಲ್ಲ ಧರ್ಮಗಳೂ ಕೊಂಡೊಯ್ಯುವುದು ಒಬ್ಬನೇ ದೇವರ ಹತ್ತಿರಕ್ಕೆ; ಭಾಷೆ, ಕಾಲ, ದೇಶ, ದೇವರ ಹೆಸರು ಇತ್ಯಾದಿಗಳು ಬೇರೆ ಬೇರೆಯಾಗಿರಬಹುದಷ್ಟೇ. ಇದನ್ನು ಸ್ವಾನುಭವದಿಂದ ಮೊಟ್ಟಮೊದಲು ಲೋಕಕ್ಕೆ ಉಚ್ಚ ಕಂಠದಿಂದ ಉದ್ಘೋಷಿಸಿದವರು ಶ್ರೀರಾಮಕೃಷ್ಣ ಪರಮಹಂಸರು. ಅವರಲ್ಲಿ ಎಲ್ಲ ಧರ್ಮಗಳೂ ಸಂಧಿಸಿದವು. ರವೀಂದ್ರನಾಥ ಟಾಗೂರರು ಹೇಳುವಂತೆ, "ವಿವಿಧ ಝರಿಗಳಿಂದ ಉದ್ಭವಿಸಿದ ವಿವಿಧ ಸಾಧನಾ ಧಾರೆಗಳು ನಿನ್ನ (ಶ್ರೀರಾಮಕೃಷ್ಣರ) ಧ್ಯಾನದಲ್ಲಿ ಸಂಮಿಳಿತಗೊಂಡವು."

**ಅವತಾರವರಿಷ್ಠಾಯ**—ಜ್ಞಾನದಾತೃವಾದ ಗುರುವಿನ ಉಪಾಸನೆಯೇ ಭಾರತದಲ್ಲಿ ಕ್ರಮೇಣ ಅವತಾರ ತತ್ತ್ವಕ್ಕೆ ಎಡೆಗೊಟ್ಟಿತು ಎಂದು ಸ್ವಾಮಿ ಶಾರದಾನಂದರು ಹೇಳುತ್ತಾರೆ. ಒಬ್ಬನು ಸ್ವಾರ್ಥವನ್ನು ಸಂಪೂರ್ಣ ಕಳೆದುಕೊಂಡು ಅಹೈತುಕ ಪ್ರೇಮವನ್ನು ಬೆಳೆಸಿಕೊಳ್ಳುವುದು ಅದೆಷ್ಟು ದುಸ್ಸಾಧ್ಯ ಮತ್ತು ಅಪರೂಪ ಎಂದರೆ ಅಂತಹ ವ್ಯಕ್ತಿಯ ಉದಯವಾದಾಗ ಜನರು ಅವನನ್ನು ಭಗವಂತನ ಅವತಾರವೆಂದು ಭಾವಿಸತೊಡಗಿದ್ದು ಸಹಜವೇ ಆಗಿದೆ. ಇಲ್ಲಿ ಭಗವಂತನ ಕಲ್ಪನೆಯೂ ಸಹ ಎಲ್ಲರೂ ಬಯಸುವ, ಆದರೆ ಸಾಧಿಸುವುದಕ್ಕೆ ಅತ್ಯಂತ ಕಷ್ಟವಾದ, ಆದರ್ಶದ ಕಲ್ಪನೆಯೇ ಹೊರತು ಬೇರೆಯಲ್ಲ. ನಮ್ಮ ಪುರಾಣಗಳಲ್ಲಿ ಬರುವ ದೇವಾನುದೇವತೆಗಳು, ಋಷಿಗಳು ಎಲ್ಲ ಆದರ್ಶ ತುಂಬಿದ ವ್ಯಕ್ತಿಗಳೇ; ಸ್ವಾರ್ಥಿಗಳೂ ಪರಪೀಡಕರೂ ಆಗಿರುವವರು ರಾಕ್ಷಸರು; ಅವತಾರ ಪುರುಷರು ಹುಟ್ಟುವುದೇ ಇಂತಹ ರಾಕ್ಷಸರನ್ನು ಹದಕ್ಕೆ ತರುವುದಕ್ಕಾಗಿ.

ನಮ್ಮ ನಿಮ್ಮ ಹಾಗಿರುವ ಸಾಮಾನ್ಯನೊಬ್ಬ 'ಅವತಾರ' ಎನ್ನಿಸಿಕೊಳ್ಳುವುದು ಹೇಗೆ? 'ಇಹ'ದಲ್ಲಿನ ಜೀವವು ವಿಕಾಸ ಹೊಂದಿ ಸಿದ್ಧವಾದಾಗ 'ಪರ' ತತ್ತ್ವ ಅದರಲ್ಲಿ ಪ್ರಕಾಶವನ್ನು ಪಡೆಯುತ್ತದೆ. ಈ 'ವಿಕಾಸ' ನಡೆದು ಬಂದ ದಾರಿ ಎಂಥದು?ಆಕಾಶಾದ್ವಾಯುಃ, ವಾಯೋರಗ್ನಿಃ, ಅಗ್ನೇರಾಪಃ, ಅದ್ಭ್ಯಃ ಪೃಥಿವೀ; ಪೃಥಿವ್ಯಾ ಓಷಧಯಃ, ಓಷಧೀಭ್ಯೋಽನ್ನಂ, ಅನ್ನಾತ್ಪುರುಷಃ—"ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ, ಅಗ್ನಿಯಿಂದ ನೀರು, ನೀರಿನಿಂದ ಪೃಥಿವೀ, ಪೃಥಿವಿಯಿಂದ ಓಷಧಿಗಳು, ಓಷಧಿಗಳಿಂದ ಅನ್ನ, ಅನ್ನದಿಂದ ಪುರುಷ"—ಈ ರೀತಿ ವಿಕಾಸದ ಹಂತವನ್ನು ಹೇಳುತ್ತದೆ ತೈತ್ತಿರೀಯ ಉಪನಿಷತ್ತು. ವಿಜ್ಞಾನದ ದೃಷ್ಟಿಯಿಂದ ನೋಡುವುದಾದರೆ—ಜ್ಯೋತಿರ್ಮೇಘವು, ನೀಹಾರಿಕೆ, ನಕ್ಷತ್ರ, ಗ್ರಹೋಪಗ್ರಹಗಳಾಗಿ ವಸ್ತುವಾಗಿ ಘನೀಭವಿಸಿದಾಗ ಅದರಲ್ಲಿರುವುದು ಪರಸ್ಪರ ಆಕರ್ಷಣೆಯ ಗುಣ, ಸಂಯುಕ್ತತೆ ಮತ್ತು ಸನ್ನಿಕಟತೆ. ಸಸ್ಯವಾಗಿ ಜೀವಾಂಕುರವಾದಾಗ ಈ ಸಂಯುಕ್ತತೆಯ ಜೊತೆಗೆ ಹೀರಿಕೊಳ್ಳುವ ಶಕ್ತಿ ಮತ್ತು ಬೆಳೆಯುವ ಶಕ್ತಿ ಸೇರಿಕೊಳ್ಳುತ್ತವೆ. ಸಸ್ಯದಲ್ಲಿ ವಸ್ತುಗಳು ಒಟ್ಟಾಗಿರುವುದರ ಜೊತೆಗೆ, ಅದು ಭೂಮಿಯಿಂದ ಸಾರವನ್ನೂ ಗಾಳಿಯಿಂದ ನೀರಾವಿ ಇಂಗಾಲಾಮ್ಲಗಳನ್ನೂ 'ಹೀರಿ'ಕೊಂಡು ಸೂರ್ಯರಶ್ಮಿಯ ನೆರವಿನಿಂದ 'ಬೆಳೆ'ಯುತ್ತದೆ. ನಿರ್ಜೀವ ವಸ್ತುವಿಗೂ ಜೀವಂತ ವಸ್ತುವಿಗೂ ಇದೇ ವ್ಯತ್ಯಾಸ—ಸುತ್ತಲಿನ ಪರಿಸರದಿಂದ ಸ್ವೀಕರಿಸಿ ತಾನು ಬೆಳೆಯುವುದು. ಇನ್ನು ಪ್ರಾಣಿಯ ಹಂತದಲ್ಲಿ ಈ ಆಕರ್ಷಣೆ, ಹೀರಿಕೊಳ್ಳುವಿಕೆ ಮತ್ತು ಬೆಳವಣಿಗೆ

ಗಳೊಂದಿಗೆ ಚಲನೆ, ಇಂದ್ರಿಯಗ್ರಹಣಗಳು ಸೇರಿಕೊಳ್ಳುತ್ತವೆ. ಪ್ರಾಣಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳನ್ನು ಗ್ರಹಿಸಬಲ್ಲದು; ಆಹಾರ ನೀರುಗಳನ್ನು ಹುಡುಕಿಕೊಂಡು ಅಲೆಯಬಲ್ಲುದು. ಅಪಾಯ ಎದುರಾದಾಗ ಓಡಿಹೋಗಬಲ್ಲದು; ತನ್ನ ಜಾತಿಯ ಇತರ ಪ್ರಾಣಿಗಳೊಂದಿಗೆ ಸಹಜ ಪ್ರವೃತ್ತಿಯಿಂದ ಒಗ್ಗೂಡಿರಬಲ್ಲದು. ಆದರೆ ಇಂದ್ರಿಯಾನುಭವಕ್ಕಿಂತ ಹೆಚ್ಚಿನ 'ಕಾಣ್ಕೆ' ಅದಕ್ಕೆ ಸಾಧ್ಯವಾಗದು.

ವಿಕಾಸವು ಮಾನವನ ಹಂತಕ್ಕೆ ಬಂದಾಗ, ಹಿಂದಿನ ಇನ್ನಿತರ ಸಾಮರ್ಥ್ಯಗಳೊಂದಿಗೆ ಅವನಿಗೆ ಬುದ್ಧಿಶಕ್ತಿಯೂ ಲಭಿಸುವುದು—ಇದರಿಂದ ತಾರ್ಕಿಕ ವಿಶ್ಲೇಷಣೆ ಸಾಧ್ಯವಾಗುವುದು. ತಾತ್ತ್ವಿಕ ಪರಿಕಲ್ಪನೆಯೇ ಮಾನವನಿಗೂ ಪ್ರಾಣಿಗೂ ಇರುವ ವ್ಯತ್ಯಾಸ. ರವಿ ಕಾಣದ್ದನ್ನು ಕವಿ ಕಾಣಬಲ್ಲ. ಸಮುದ್ರದ ಆವರೆಗಿನ ಪರಿಜ್ಞಾನವನ್ನು ಬಳಸಿಕೊಂಡು ಕೊಲಂಬಸ್ ಮುನ್ನುಗ್ಗಿ ಅಮೆರಿಕಾವನ್ನು ಕಂಡುಹಿಡಿದ. ಇಂತಹ ಮರ್ಮಭೇದಿಯಾದ ಆವಿಷ್ಕಾರ ಪ್ರಾಣಿಗೆ ಸಾಧ್ಯವಿಲ್ಲ. **ಪ್ರಜ್ಞಾಪೂರ್ವಕ ಆಸಕ್ತಿ, ಆಕರ್ಷಣೆ, ಆವಿಷ್ಕಾರ, ಆಧ್ಯಾತ್ಮಿಕತೆಗಳು ಮಾನವನಿಗೆ ಮಾತ್ರ ಸಾಧ್ಯ.** ತನ್ನ ಇಚ್ಛೆ, ಅರಿವುಗಳನ್ನು ಬಳಸಿಕೊಂಡು ಅವನು ಪ್ರಕೃತಿಯ ಹಿಡಿತದಿಂದ ತಪ್ಪಿಸಿಕೊಳ್ಳಬಲ್ಲ, ಸ್ವತಂತ್ರನಾಗಬಲ್ಲ. ಪ್ರಕೃತಿಗೆ ಇಲ್ಲದ ಭೂತ ಭವಿಷ್ಯತ್ತುಗಳ ಅರಿವು ಮಾನವನಿಗೆ ಇದೆ. ಭಗವಂತನ ಬೆಳಕು ಎಲ್ಲದರ ಮೇಲೂ ಬೀಳುವುದಾದರೂ, ಅದನ್ನು ಪ್ರತಿಬಿಂಬಿಸುವ ಶಕ್ತಿ ಇರುವುದು ಮನುಷ್ಯನಿಗೆ ಮಾತ್ರವೇ. ದೇವರು ಕೊಟ್ಟ ಅನ್ವೇಷಣೆಯ ಶಕ್ತಿಯನ್ನು ಬಳಸಿಕೊಂಡು ಮಾನವನು ಅವನ ಕಡೆಗೆ ಸಾಗಬೇಕು. ಇದೇ ತಪಸ್ಸು.

ಈ ವಿಶ್ವವನ್ನೆಲ್ಲ ವ್ಯಾಪಿಸಿಕೊಂಡಿರುವ ಸತ್-ಚಿತ್-ಆನಂದ ಸಾಗರವು ಒಂದು ಭಾಂಡದಲ್ಲಿರುವ ಸಕ್ಕರೆ ಪಾಕದಂತೆ ಇದೆಯೆಂದು ಊಹಿಸುವುದಾದರೆ, ಪ್ರಾಣಿಮಟ್ಟವನ್ನು ಈಗತಾನೆ ಹಾದುಬಂದ ಮನುಷ್ಯ ನೀರಿನಲ್ಲಿ ಕಲಸಿ ಉಂಡೆಕಟ್ಟಿದ ಜಾಮೂನ್ ಹಿಟ್ಟಿನ ಹಾಗೆ. ಹಸಿಹಿಟ್ಟಿನ ಜಾಮೂನ್ ಉಂಡೆಯಲ್ಲಿ ಸಕ್ಕರೆ ಪಾಕ ಪ್ರವೇಶಿಸಲಾರದು. ನೀವು ಒತ್ತಾಯದಿಂದ ಕಲೆಸಿದರೆ ಉಂಡೆಯ ಅಸ್ತಿತ್ವವೇ ನಾಶವಾಗುವುದು. ಬದಲಿಗೆ ಆ ಹಿಟ್ಟಿನ ಉಂಡೆಯನ್ನು ಸಾಧನೆಯ ತುಪ್ಪದಲ್ಲಿ, ತಪಸ್ಸಿನ ಬೆಂಕಿಯಲ್ಲಿ ಬೇಯಿಸಿದರೆ, ಅದರಲ್ಲಿನ ಇಂದ್ರಿಯ ಲೋಲುಪತೆ ಎಂಬ ಬೇಕಿಂಗ್ ಪೌಡರ್ ವಿಭಜನೆ ಹೊಂದಿ ಅನಿಲ ರೂಪಕ್ಕೆ ಬಂದು ತಪ್ಪಿಸಿಕೊಂಡು ಹೋಗುವಾಗ ಉಂಡೆಯಲ್ಲಿ ಮಿಲಿಯಗಟ್ಟಲೆ ಸೂಕ್ಷ್ಮರಂಧ್ರಗಳನ್ನುಂಟುಮಾಡುವುದು; ಈ ಕರಿದ ಉಂಡೆಯನ್ನು ಸಕ್ಕರೆ ಪಾಕಕ್ಕೆ ಹಾಕಿದಾಗ, ಆ ಪಾಕವು ಈ ರಂಧ್ರಗಳಲ್ಲಿ ಬಂದು ತುಂಬಿಕೊಳ್ಳುವುದು; ಉಂಡೆ ಸರ್ವಪ್ರಿಯ ಖಾದ್ಯವೆನಿಸುವುದು. ಹೀಗೆ ಪ್ರಜ್ಞಾಪೂರ್ವಕವಾಗಿ ಸಚ್ಚಿದಾನಂದ ಸ್ವರೂಪಿ ಬ್ರಹ್ಮವಸ್ತುವು ನಮ್ಮೊಳಗೆ ಓತಪ್ರೋತವಾಗುವುದೇ involution ಅಥವಾ ಅವತರಣ; ನಿರ್ಜೀವವಸ್ತುವಿನ ಅಪ್ರಜ್ಞಾವಸ್ಥೆಯಿಂದ ಪ್ರಾರಂಭಿಸಿ ಬ್ರಹ್ಮವಸ್ತುವನ್ನು ಆಹ್ವಾನಿಸುವ ಸಚ್ಛಿದ್ರತೆಯನ್ನು ಉಂಟುಮಾಡಿಕೊಳ್ಳುವವರೆಗಿನ ಪರಿಣಾಮಗಳ ಸರಮಾಲೆಯೇ evolution ಅಥವಾ ವಿಕಾಸ. ವಿಕಾಸ ಆಗಿದೆ ಎಂಬುದಕ್ಕೆ ವ್ಯಕ್ತಿತ್ವ ಸಚ್ಚಿದಾನಂದಮಯವಾಗಿ ಸಿಹಿಯಾಗುವುದೇ ಸಾಕ್ಷಿ.

ಭಗವಂತನು ಮಹಾತ್ಮರಲ್ಲಿ ತನ್ನ ಅಂಶವನ್ನು ಮಾತ್ರ ವ್ಯಕ್ತಗೊಳಿಸುವನು—ಹೂವಿನಲ್ಲಿರುವ ಮಕರಂದದ ಬಿಂದುವಿನಂತೆ. ನೀವು ಹೂವನ್ನು ಚೀಪಿದರೆ ಸ್ವಲ್ಪ ಮಕರಂದ ಸಿಕ್ಕುವುದು. ಆದರೆ ಅವತಾರ ಪುರುಷರಲ್ಲಿರುವುದೆಲ್ಲ ಜೇನು. ಅಲ್ಲಿರುವುದೆಲ್ಲ ಮಾಧುರ್ಯವೇ, ಆನಂದಮಯವೇ. —ಶ್ರೀರಾಮಕೃಷ್ಣ.

ಹಾಗಾದರೆ, ಮಾಡಿದ ಜಾಮೂನೆಲ್ಲವೂ, ಎಂದರೆ ಬ್ರಹ್ಮಾನುಭೂತಿಯನ್ನು ಪಡೆದುಕೊಂಡ ಸಿದ್ಧಪುರುಷರೆಲ್ಲರೂ, ಅವತಾರಗಳೆನ್ನೋಣವೆ? ಹೆಚ್ಚಿನ ಜಾಮೂನುಗಳು, ಇಲ್ಲವೇ ಮೇಲೆ ಹೆಚ್ಚು ಸುಟ್ಟಿರುತ್ತವೆ, ಇಲ್ಲವೆ ಮೇಲೆ ಹದವಾಗಿದ್ದು ಒಳ ಅಂತರ್ಯದಲ್ಲಿ ಸ್ವಲ್ಪ ಗಟ್ಟಿತನವನ್ನು ಉಳಿಸಿಕೊಂಡಿರುತ್ತವೆ. ಹೀಗೆ ಅಂತರ್ಯದಲ್ಲಿ ಸ್ವಾರ್ಥದ ಲವಲೇಶವುಳ್ಳವರು ಕೇವಲ ಸಿದ್ಧಪುರುಷರು; ಹೊರಗೆ ಸೀದುಹೋದವರು ತೋತಾಪುರಿಯ ಹಾಗೆ ಅತಿರಿಕ್ತರು. ಸಚ್ಚಿದಾನಂದ ಪರಿಪಾಕವೇ ಆಕೃತಿಯನ್ನು ಪಡೆದಿದೆಯೋ ಎಂಬಂತೆ ನಿತ್ಯಶುದ್ಧ ಬುದ್ಧ ಮುಕ್ತ ಸ್ವಭಾವದವರು ಮಾತ್ರವೇ ಅವತಾರ ಪುರುಷರು. ಸಾಮಾನ್ಯರಂತೆ ಅವರು ಎಂದೂ ಭೋಗಸುಖಗಳಿಗಾಗಿ ಸ್ವಾರ್ಥಕ್ರಿಯೆಗಳಲ್ಲಿ ತೊಡಗುವುದಿಲ್ಲವಾದ್ದರಿಂದ ಕರ್ಮಬಂಧನಕ್ಕೆ ಒಳಗಾಗುವುದಿಲ್ಲ. ಅಂಥವರ ಬದುಕಿನ ಎಲ್ಲ ಕ್ಷಣಗಳೂ, ಎಲ್ಲ ಕ್ರಿಯೆಯೂ, ಪರಹಿತಕ್ಕಾಗಿಯೇ ಮೀಸಲು.

ಇಂತಹ ಅವತಾರಗಳಲ್ಲಿ ಶ್ರೀರಾಮಕೃಷ್ಣರು ವರಿಷ್ಠರು ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಹಿಂದಿನ ಅವತಾರಗಳಂತೆ ಅವರು ಪವಾಡಗಳನ್ನು ಮೆರೆಯಲಿಲ್ಲ; ದುಷ್ಟಶಿಕ್ಷಣ, ಶಿಷ್ಟರಕ್ಷಣ ಎಂದು ಹೊರಡಲಿಲ್ಲ; ಬುದ್ಧನಾಗುತ್ತೇನೆ ಎಂದು ಎಲ್ಲವನ್ನೂ ಬಿಟ್ಟು ಹೋಗಲಿಲ್ಲ; ಯುದ್ಧಗಳನ್ನು ಮಾಡಿಸಿ ಅಸುರ ಸಂಹಾರ ಮಾಡಿ ಭೂಭಾರವನ್ನು ಇಳಿಸಲಿಲ್ಲ. ಆದರೆ ಸಾಮಾನ್ಯರಲ್ಲಿ ಸಾಮಾನ್ಯನಾಗಿದ್ದುಕೊಂಡು, ಅನುಕ್ಷಣವೂ ಅನುದಿನವೂ ಆದರ್ಶವನ್ನು ಬದುಕಿಬಾಳಿ ತೋರಿಸಿದರು. ಜೀವನದ ಸಾಮಾನ್ಯ ಸಂಗತಿಗಳಲ್ಲಿಯೇ ಅಸಾಮಾನ್ಯತೆಯ ದಿವ್ಯದರ್ಶನ ಮಾಡಿಸಿದರು. ವಿಜ್ಞಾನವು ಪರಮಾಣು ರಚನೆಯ ಅದ್ಭುತವನ್ನು ಆವಿಷ್ಕಾರ ಮಾಡಿದ ಸಂಧಿಕಾಲದಲ್ಲಿಯೇ, ಭಗವಂತನ ಮೇಲಿದ್ದ ಅದ್ಭುತದ ಅವಗುಂಠನವನ್ನು ತೆಗೆದುಹಾಕಿ, ದೇವರೆಂಬ ನಿಗೂಢತೆಯನ್ನು ತೊಡೆದುಹಾಕಿ, ಅವನನ್ನು ಸರ್ವಗ್ರಾಹ್ಯ ಮಾಡಿದವರು ಶ್ರೀರಾಮಕೃಷ್ಣ ಪರಮಹಂಸರು. ಜೀವನೇ ಶಿವ—ತತ್ ತ್ವಂ ಅಸಿ—ಎಂಬ ಉಪನಿಷತ್ತಿನ ಮಾತನ್ನು ಎಲ್ಲರಿಗೂ ಮನದಟ್ಟು ಮಾಡಿಕೊಟ್ಟರು; ಜೀವರ ಸೇವೆಗಿಂತ ಮಿಗಿಲಾದ ಈಶ ಸೇವೆಯಿಲ್ಲ ಎಂಬುದನ್ನು ತಮ್ಮದೇ ಬದುಕಿನಲ್ಲಿ ಆಚರಿಸಿ ತೋರಿಸಿಕೊಟ್ಟರು. ಇದನ್ನೆಲ್ಲ ನೋಡಿದರೆ ಅವತಾರವರಿಷ್ಠ ಎಂಬ ಮಾತೂ ಸಹ ಸಾಕಾಗದು ಎನ್ನಿಸದಿರದು. ಆಳ ಅಧ್ಯಯನ, ವಿಚಾರ ಮತ್ತು ಅನುಭವಗಳ ಮಂಥನದ ಫಲಸ್ವರೂಪವಾಗಿ ಈ ಮೇಲಿನ ಶ್ಲೋಕವು ಸ್ವಾಮಿ ವಿವೇಕಾನಂದರ ಹೃದಯಾಂತರಾಳದಿಂದ ಹೊರಹೊಮ್ಮಿದೆ ಎಂದು ಹೇಳಬಹುದು. ✻